ಇದರನ್ವಯ ಸಹಕಾರ ಸಂಘಗಳ ನಿಬಂಧಕರು ಸಂಘಕ್ಕೆ ದಿನಾಂಕ ೧೪-೧೨-೧೯೮೭ ರಂದು ಪತ್ರವೊಂದನ್ನು ಬರೆದು, ಹಣ ಬಿಡುಗಡೆ ಮಾಡಲು ಕೋರಿ ಪ್ರಸ್ತಾಪನೆಯೊಂದನ್ನು ಕಳುಹಿಸಲು ಕೋರಿದರು. ಅಂತೆಯೇ ಸಹಾಯ ಧನದ ಬಿಡುಗಡೆ ಬಗ್ಗೆ ವಿಧಿಸಲ್ಪಟ್ಟ ಪರತ್ತು ಮತ್ತು ನಿಯಮಗಳನ್ನು ಕಳುಹಿಸಲು ಕೃಷಿ ಇಲಾಖೆಯ ನಿರ್ದೇಶಕರನ್ನೂ ಸಹಾ ಸಹಾಯ ಧನವನ್ನು ಬಿಡುಗಡೆ ಮಾಡಲು ಸರ್ಕಾರದ ಅನುಮೋದನೆ ಪಡೆಯುವ ಸಲುವಾಗಿ ಕೋರಿದರು. ಸದರಿ ಸಂಘದ ಸಲಹೆಗಾರರಾದ (ಮಾನ್ಯ ಶ್ರೀ ಕೆ. ಹೆಚ್. ಪಾಟೀಲರು) ಅವರ ಪತ್ರ ದಿನಾಂಕ ೧೪-೧೨-೧೯೮೭ ರೊಂದಿಗೆ ಹಣ ಬಿಡುಗಡೆಯ ಬಗ್ಗೆ ಕೋರಿ ಸಂಘದ ತಾರೀಖು ೧೨-೧೨-೧೯೮೭ರ ಪ್ರಸ್ತಾಪನೆಯನ್ನು ಬೆಳಗಾವಿಯ ಸಂಯುಕ್ತ ನಿಬಂಧಕರಿಗೆ ಕಳುಹಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ನಿಬಂಧಕರಿಗೆ ದಿನಾಂಕ ೨೬-೧೨-೧೯೮೭ ರಂದು ಬೆಳಗಾವಿಯ ಸಂಯುಕ್ತ ನಿಬಂಧಕರು, ಹಣ ಬಿಡುಗಡೆ ಮಾಡಲು ಸಲ್ಲಿಸಿರುತ್ತಾರೆ.

ಶೇಕಡ ೨೫ ರಷ್ಟು ಸಾಲಧನ ನೀಡಿಕೆಯನ್ನು ಕುರಿತು ೪,೬೩,೦೦೦-೦೦ ರೂ.ಗಳನ್ನೊಳಗೊಂಡ ಪ್ರಸ್ತಾವನೆಯೂ ಸಹಾ ಸರ್ಕಾರಕ್ಕೆ ನಿಬಂಧಕರಿಂದ ಬಂದಿದ್ದು ಅದೂ ಸಹಾ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಪಿ, ಡಿ. ಅಕೌಂಟಿನಿಂದ ಧನಸಹಾಯ ಮಾಡುವ ಕುರಿತು ಸಹಕಾರ ಸಂಘಗಳ ನಿಬಂಧಕರು ಕೃಷಿ ಇಲಾಖೆಯ ನಿರ್ದೇಶಕರಿಗೆ ಬರೆದಿರುವ ಪತ್ರಕ್ಕೆ ಅವರು ದಿನಾಂಕ ೮-೧-೧೯೪೮ರಂದು ಉತ್ತರಿಸಿ, ಜಾರಿಯಲ್ಲಿರುವ ನಿಯಮಾವಳಿಯ ಪ್ರಕಾರ ಸಹಾಯಧನ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲು ಸೂಚಿಸಿರುತ್ತಾರೆ. ಹಾಗೆಯೇ ದಿನಾಂಕ ೧೧-೧-೧೯೪೮ರಂದು ನಿರ್ದೇಶಕರು ಮಾನ್ಯ ಶ್ರೀ ಕೆ ಹೆಚ್. ಪಾಟೀಲ್‌ರವರಿಗೆ ಅರೆ ಸರ್ಕಾರಿ ಪತ್ರವೊಂದನ್ನು ಬರೆದು ಇಲಾಖೆಯು ಹಣ ಬಿಡುಗಡೆ ಮಾಡುವ ಮುನ್ನ ಕೆಲವು ಪರತ್ತು ಮತ್ತು ನಿಯಮಗಳನ್ನು ಸೂಚಿಸಬೇಕಾಗುತ್ತದೆಂತಲೂ ತಿಳಿಸಿರುತ್ತಾರೆ.

ಆದಂದರಿಂದ ಯಾವುದೇ ರೀತಿಯಿಂದಲೂ ತಡವಾಗಿದ್ದಲ್ಲಿ ಅದು ರಾಷ್ಟ್ರೀಯ ಬೇಳೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಸಹಾಯಧನ ಮಂಜೂರಾತಿ ನೀಡುವ ವಿಧಾನದಲ್ಲಿ ಆದ ಬದಲಾವಣೆಯಿಂದಾಗಿಯೇ ಆಗಿರುತ್ತದೆಂದು ಮನಗಾಣಬಹುದು.

ಶ್ರೀ ಕೆ. ಹೆಚ್. ಪಾಟೀಲ್.—ಇಲ್ಲಿಯವರೆಗೂ ಸರಕಾರದವರು ಹಣವನ್ನು ಬಿಡುಗಡೆ ಮಾಡಿಲ್ಲ ಪತ್ರ ಬರೆದಿದ್ದೀರಿ ಅಷ್ಟೇ. ೧೯೮೮ನೇ ಇಸವಿಯೊಳಗೆ ಇದು ಆಗಬೇಕೆಂದು ಎನ್.ಸಿ.ಡಿ.ಸಿ.ಯವರು ಹೇಳುತ್ತಿದ್ದಾರೆ. ಇನ್ನೂ ಅಕ್ವಿಸಿಷನ್ ಪ್ರಕರಣ ಮುಗಿಸಿಲ್ಲ ಇದು ಕಂದಾಯ ಮಂತ್ರಿಗಳಿಗೆ ಸಂಬಂಧಿಸಿದ್ದುದು. ಇದಲ್ಲಾ ಆಗದ ಹೊರತು ಹೊಲವನ್ನು ಖರೀದಿ ಮಾಡಲಿಕ್ಕೆ ಬರುವುದಿಲ್ಲ. ಇದು ಕೈಗಾಂಕೆ ಆಗಬೇಕೆನ್ನುವ ದೃಷ್ಟಿಯಿಂದ ಮುಖ್ಯಮಂತ್ರಿ ವಹಿಸಿ ಆದಷ್ಟು ಬೇಗ ಲ್ಯಾಂಡ್ ಅಕ್ವಿಜರ್ ಮಾಡಿ ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ತಮ್ಮನ್ನು ವಿನಂತಿಸುತ್ತೇನೆ.

ಶ್ರೀ ಹೆಚ್. ವಿಶ್ವನಾಥಯ್ಯ.—ಸಾಧ್ಯವಾದಷ್ಟು ಬೇಗ ಹಣವನ್ನು ಬಿಡುಗಡೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

(3) ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಯನ್ನು ಬೆಳಿಗ್ಗೆ 6 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ನಿಲ್ಲಿಸಿರುವ ಬಗ್ಗೆ

ಶ್ರೀ ಜಿ. ರಾಜೂಗೌಡ —ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶಗಳಲ್ಲಿ ಬೆಳಿಗ್ಗೆ ೬ ಗಂಟೆಯಿಂದ ಮಧ್ಯಾಹ್ನ ೨ ಗಂಟೆಯವರೆಗೆ ವಿದ್ಯುಚ್ಛಕ್ತಿ ಸರಬರಾಜು ನಿಲ್ಲಿಸಿರುವುದರಿಂದ ರಾಜ್ಯದ ರೈತರು ಗಳಿಗೆ ವ್ಯವಸಾಯ ಮಾಡಲು ತೊಂದರೆಯಾಗುತ್ತಿರುವ ವಿಷಯದ ಬಗ್ಗೆ ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೇ ನನ್ನ ಉತ್ತರ ಈ ರೀತಿ ಇದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಬೆಳಿಗಿನ ೬ ಘಂಟೆಯಿಂದ ಮಧ್ಯಾಹ್ನ ೨ ಘಂಟೆವರೆಗೆ ವಿದ್ಯುಚ್ಛಕ್ತಿ ಸರಬರಾಜು ನಿಲ್ಲಿಸಿರುವುದರಿಂದ ರಾಜ್ಯದ ರೈತರು ನೀರಾವರಿ ಭೂಮಿಯಿಂದ ವಿದ್ಯುಚ್ಛಕ್ತಿ ಮೋಟಾರುಗಳ

ಮೂಲಕ ನೀರಿತ್ತಿ ವ್ಯವಸಾಯ ಮಾಡಲು ಆಗುವ ತೊಂದರೆ ಬಗ್ಗೆ ಮಾನ್ಯ ವಿದ್ಯುಚ್ಛಕ್ತಿ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ರಾಜ್ಯದಲ್ಲಿ ಮುಂಗಾರು ವಿಫಲವಾದ ಕಾರಣ ಆಂತರಿಕ ವಿದ್ಯುತ್ ಉತ್ಪಾದನೆ ತುಂಬಾ ಕಡಿಮೆಯಾಗಿ ವಿದ್ಯುತ್ ಕೊರತೆ ಅಧಿಕವಾಯಿತು. ಭಾಗಶಃ ಕೊರತೆಯನ್ನು ನೆರೆ ರಾಜ್ಯಗಳ ವಿದ್ಯುತ್ ನೆರವಿನಿಂದ. ಕೇಂದ್ರದ ಯೋಜನೆಗಳಲ್ಲಿನ ರಾಜ್ಯದ ಪಾಲನ್ನು ಪಡೆಯುವುದರ ಮೂಲಕ ತುಂಬಲಾಗಿದ್ದು ಉಳಿದ ಕೊರತೆ ತುಂಬಲು ನೀರಾವರಿ ಪಂಪುಸೆಟ್ಟುಗಳ ಗ್ರಾಹಕರು ಮತ್ತು ವಿದ್ಯುತ್ ಚಿತಾಗಾರಗಳನ್ನು ಬಿಟ್ಟು ಉಳಿದ ಎಲ್ಲಾ ಗ್ರಾಹಕರ ಬಳಕೆಯ ಮೇಲೂ ಕಡಿತ ವಿಧಿಸಲಾಗಿದೆ. ನೀರಾವರಿ ಪಂಪುಸೆಟ್ಟು ಬಳಕೆದಾರರಿಗೆ ಇದರಿಂದ ವಿನಾಯಿತಿ ದೊರೆತಂತೆ ಅವರುಗಳ ಬಳಕೆ ಮೇಲೆ ನಿರ್ಬಂಧವಿಲ್ಲ.

ಎಲ್ಲಾ ವಿವಿಧ ಗ್ರಾಹಕರಿಂದಲೂ ಮುಂಡಿಗೆ ಕೊರತೆ ತುಂಬಿಲು ಸಹಕಾರ ದೊರತಂತೆ ಪಂಪುಸೆಟ್ಟು ಗ್ರಾಹಕರಿಂದಲೂ ಸಹಕಾರ ಅತ್ಯವಶ್ಯಕವೂ ಅನಿವಾರ್ಯವೂ ಆಗಿದೆ. ರಾಜ್ಯದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ನೀರಾವರಿ ಪಂಪುಸೆಟ್ಟುಗಳ ಲೋಡ್ ಅಧಿಕವಾಗಿದೆ. ಈ ಬಗೆಯ ಗ್ರಾಹಕರಿಂದ ಸ್ವಲ್ಪ ಮಟ್ಟಿನ ಸಹಕಾರ ನಿರೀಕ್ಷೆಯಿಂದ ಗ್ರಾಮೀಣ ಪ್ರದೇಶಗಳಲ್ಲಿನ ಫೀಡರುಗಳಲ್ಲಿ ಪೂರ್ವ ನಿಯೋಜಿತ ರೀತಿ ವಿದ್ಯುತ್ ನಿಲುಗಡೆ ಮಾಡಿ ಸ್ವಲ್ಪ ಭಾಗ ವಿದ್ಯುತ್ ಕೊರತೆ ತುಂಬಲಾಗಿ ಈಗಿನ ಸಂಕಷ್ಟ ಸ್ಥಿತಿಯಲ್ಲಿ ರೈತ ಬಾಂಧವರ ಸಹಕಾರ ಅತ್ಯಗತ್ಯ.

ರೈತವರ್ಗದವರ ಮನವಿ ಮೇರೆಗೆ ಈ ಹಿಂದೆ ನಿಗದಿ ಮಾಡಲಾಗಿದ್ದ ವಿದ್ಯುತ್ ನಿಲುಗಡೆ ವೇಳೆಯನ್ನು ಪುನರ್ವಿಮರ್ಶಿಸಿ ಈಗ ಒಂದು ದಿನ ಹಗಲಿನಲ್ಲಿ ೬ ಘಂಟೆಯಿಂದ ಪ್ರಾರಂಭವಾಗಿ ೨ ಘಂಟೆ ವರೆಗೂ ಮತ್ತು ದಿನ ಹಗಲು ೯ ಘಂಟೆಯಿಂದ ಸಂಜೆ ೫ ಘಂಟೆವರೆಗೂ ವಿದ್ಯುತ್ ನಿಲುಗಡೆ ಮಾಡುವ ವ್ಯವಸ್ಥೆ ಮಾಡಲಾಗಿದೆ. ಇದರಿಂದಾಗಿ ದಿನ ೧೬ ಘಂಟೆಗಳ ಕಾಲ ಪಂಪುಸೆಟ್ಟುಗಳಿಗೆ ವಿದ್ಯುತ್ ಲಭ್ಯವಿರುತ್ತದೆ.

ರಾಜ್ಯದಲ್ಲಿ ೩೧-೧೨-೧೯೮೭ರ ವೇಳೆಗೆ ೫,೭೦,೨೯೯ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿತ್ತು. ೧೯೮೬-೮೭ನೇ ಸಾಲಿನಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ೧೫೧೭ ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಒದಗಿಸಲಾಯಿತು. ಇನ್ನು ಆ ವರ್ಷ ಎಲ್ಲಾ ವರ್ಗದ ಗ್ರಾಹಕರಿಗೂ ಒದಗಿಸಲಾದ ಒಟ್ಟು ವಿದ್ಯುತ್ತಿನ ಶೇಕಡಾ ೧೯.೫೨ ಭಾಗವಾಗಿತ್ತು.

ಶ್ರೀ ಜಿ. ರಾಜೂಗೌಡ.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ಕೊಟ್ಟಿರತಕ್ಕಂತಹ ಪೇಳಿಕೆಯನ್ನು ನೋಡಿದರೆ ಒಂದಕ್ಕೊಂದು ವಿರೋಧಾಭಾಸವಾಗಿದೆ. ತಾವು ಹೇಳಿದ್ದೀರಿ ಉಳಿದ ಕೊರತೆ ತುಂಬಲು ನೀರಾವರಿ ಪಂಪುಸೆಟ್ಟುಗಳ ಗ್ರಾಹಕರು ಮತ್ತು ವಿದ್ಯುತ್ ಚಿತಾಗಾರಗಳನ್ನು ಉಳಿದು ಎಲ್ಲಾ ಗ್ರಾಹಕರ ಬಳಕೆಯ ಮೇಲೂ ಕಡಿತ ವಿಧಿಸಲಾಗಿದೆ ಎಂದು. ಅಂದರೆ ಈ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂತಹ ನೀರಾವರಿ ಪಂಪುಸೆಟ್ಟುಗಳ ಮೇಲೆ ಯಾವುದೇ ರೀತಿಯಾದಂತಹ ಕಡಿತ ಇಲ್ಲವೆಂದು ಅರ್ಥವಾಗುತ್ತದೆ. ಆದರೆ ಇಲ್ಲಿ ಕೆಳಗಡೆ ಒಂದು ದಿನದಲ್ಲಿ ೧೬ ಗಂಟೆಗಳ ಕಾಲ ಪಂಪುಸೆಟ್‌ಗಳಿಗೆ ವಿದ್ಯುತ್ ಲಭ್ಯವಿರುತ್ತದೆ ಎಂದು ಹೇಳಿದ್ದೀರಿ ಇದಕ್ಕೆ ಸಮಜಾಯಿಷಿ ಕೊಡಬೇಕು. ರಾತ್ರಿ ಹೊತ್ತು ೧೧ರಿಂದ ಬೆಳಗ್ಗೆ ೬ ಗಂಟೆಯವರೆಗೂ ವಿದ್ಯುಚ್ಛಕ್ತಿಯನ್ನ ಖೋತಾ ಮಾಡಿ ಬೆಳಗಿನ ಹೊತ್ತು ರೈತರಿಗೆ ವಿದ್ಯುತ್ ಅನ್ನು ಸರಬರಾಜು ಮಾಡಿ.

ಶ್ರೀ ಎಂ. ಎಸ್. ಪಾಟೀಲ.—ಮಾನ್ಯ ಉಪಾಧ್ಯಕ್ಷರೇ, ಹಿರಿಯ ಸದಸ್ಯರಾದ ಶ್ರೀ ನಾರಾಯಣ ಸ್ವಾಮಿಯವರು ಹೇಗೆ ಕುಳಿತ್ತಿದ್ದಾರೆ ನೋಡಿ ಹಾಗೆ ಕುಳಿತರೆ ಹೇಗೆ?

ಉಪಾಧ್ಯಕ್ಷರು.—ಎಲ್ಲರೂ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಬೇಕು.

ಸ್ವಾಮಿ, ರಾಜ್ಯದಲ್ಲಿ ವಿದ್ಯುತ್ ಕೊರತೆ ಇರುವುದು ನಮಗೆ ಗೊತ್ತಿದೆ. ಈ ದಿಸೆಯಲ್ಲಿ ಎಲ್ಲಾ ವರ್ಗದ ಬಳಕೆದಾರರು ಸಹಕರಿಸಬೇಕು ಎಂದು ಕೇಳಿದ್ದೀರಿ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ತಾವು ಕೆಲವೊಂದು ಪಕ್ಷಪಾತ ಮಾಡುತ್ತೀರಿ. ಇದು ಧರ್ಮವೇ ? ವಿದ್ಯುತ್ತನ್ನು ೨೪ ಗಂಟೆಗಳ ಕಾಲ ಸರಬರಾಜು ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತಿದ್ದೇವೆ. ನಾನು ತಮ್ಮಲ್ಲಿ ಕೇಳತಕ್ಕಂಥದ್ದು ಇಷ್ಟೆ. ರಾತ್ರಿ ವೇಳೆಯಲ್ಲಿ ವಿದ್ಯುತ್ ಕೊಟ್ಟರೆ ವ್ಯವಸಾಯವನ್ನು ಮಾಡುವುದಕ್ಕಾಗುತ್ತದೆಯೇ ? ಕಬ್ಬಿಗೆ ನೀರು ಕಟ್ಟುವುದಕ್ಕಾಗುತ್ತದೆಯೇ ? ನಾಟಿ ಹಾಕುವುದಕ್ಕೆ ಆಗುತ್ತ

ದಿಯೇ ? ನಾವು ಕೇಳುವುದು ಏನೆಂದರೆ ರಾತ್ರಿ ಕಾಲದಲ್ಲಿ ವಿದ್ಯುತ್ ಕಡಿತ ಮಾಡಿ ನಮಗೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ವಿದ್ಯುತ್ ಕೊಟ್ಟರೆ ಅನುಕೂಲವಾಗುತ್ತದೆ. ದಯವಿಟ್ಟು ಇದರಲ್ಲಿ ತಾವು ಪಕ್ಷಪಾತ ಮಾಡಬೇಡಿ. ರೈತನೇ ಈ ದೇಶದ ಬೆನ್ನೆಲುಬು. ರೈತನೇ ಈ ದೇಶದ ಅನ್ನದಾತ. ಈ ಅನ್ನದಾತನನ್ನು ಮರೆಯಬೇಡಿ ಅವನನ್ನು ಪರೀತರೆ ಈ ರಾಜ್ಯದ ಬೊಕ್ಕಸ ಬರಿದಾಗುತ್ತದೆ. ರಾತ್ರಿ ೧೧ ಗಂಟೆಯಿಂದ ಬೆಳಿಗ್ಗೆ ೭ ಗಂಟೆಯವರೆಗೂ ವಿದ್ಯುತ್ತ್‌ನ್ನು ಕಡಿತ ಮಾಡಿ ನಮಗೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಅನುಕೂಲವಾಗುತ್ತದೆ. ತಾವು ೨೯ನೇ ತಾರೀಖು ಪವರ್ ರೆವ್ಯೂ ಕಮಿಟಿ ಮೀಟಿಂಗ್‌ನ್ನು ಇಟ್ಟುಕೊಂಡಿದ್ದೀರಿ. ಅದರಲ್ಲಿ ದಯವಿಟ್ಟು ಈ ರೈತನ ಬಗ್ಗೆ ಯೋಚನೆ ಮಾಡಬೇಕೆಂದು ಕಳಕಳಿಯಿಂದ ಈ ರಾಜ್ಯದ ರೈತರ ಪರವಾಗಿ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇಷ್ಟು ಅನುಕೂಲ ಮಾಡಿಕೊಟ್ಟರೆ ಸಾಕು. ನಮಗೆ ಇನ್ನೇನು ಬೇಡ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ರಾಜೂಗೌಡರಂ ಮೊದಲು ಪ್ರಾರಂಭಿಸಿದಾಗ ನಾನು ಕೊಟ್ಟೇಥ ಹೇಳಿಕೆಯಲ್ಲಿ ವಿಭಿನ್ನತೆ ಇದೆ ಎಂದು ಹೇಳಿದ್ದಾರೆ. ಅದು ಸರಿಯಲ್ಲ ಕಾರಣವೇನೆಂದರೆ ನಾವು ಅವರಿಗೆ ವಿದ್ಯುತ್ ಕಡಿತ ಮಾಡಿಲ್ಲ. ಸಾಮಾನ್ಯವಾಗಿ ಬೇರೆ ಬೇರೆ ಕಡೆಗಳಲ್ಲಿ ಸುಮಾರು ೧೦ ರಿಂದ ೮೦ ಪರ್‌ಸೆಂಟ್ ನಿಗಧಿಪಡಿಸಿ ೮೦ ಪರ್‌ಸೆಂಟ್ ಕಟ್ ಮಾಡಿದ್ದೇವೆ. ಎ.ಇ.ಹೆಚ್ ೧೮೦ ಯೂನಿಟ್‌ನ್ನು ಅಲಾಟ್ ಮಾಡಿ ಅದರಲ್ಲಿ ೨೫ ಭಾಗವನ್ನು ಕಟ್ ಮಾಡಿದ್ದೇವೆ. ರೈತರು ಎಷ್ಟು ಉಪಯೋಗಿಸಬೇಕೆಂದು ಹೇಳಿದ್ದೇವೆಯೋ ಅದಕ್ಕಿಂತ ಹೆಚ್ಚಿಗೆ ಉಪಯೋಗಿಸಿದರೂ ನಾವು ಏನೂ ಮಾಡುವ ಹಾಗೆ ಇಲ್ಲ. ಕಾರಣವೇನೆಂದರೆ ಅವರಿಗೆ ಮೀಟರ್ ಇಲ್ಲ. ಮತ್ತೆ ಇನ್ನೊಂದು ಮಾತನ್ನು ಹೇಳಿದರು, ತಾರತಮ್ಯ ಮಾಡುತ್ತಿದ್ದಾರೆ ಎಂದು. ನಾವು ಎಲ್ಲಿಯಾದರೂ ತಾರತಮ್ಯವನ್ನು ಮಾಡಿಲ್ಲ. ನಗರಗಳಲ್ಲಿ ಆಥವಾ ಕೈಗಾರಿಕಾ ಪಲಯದಲ್ಲಿ ವಿದ್ಯುತ್‌ನ್ನು ನಿಗಧಿ ಮಾಡಿದ್ದೇವೆ, ಆದರೆ ನಾವು ಪಂಪ್‌ಸೆಟ್‌ಗಳ ಮೇಲೆ ಹಿಡಿತವನ್ನು ಹಿಡಿಯುವುದಕ್ಕಾಗುವುದಿಲ್ಲ. ಮತ್ತೆ ರಾತ್ರಿ ವೇಳೆ ಕರೆಂಟನ್ನು ಕಟ್ ಮಾಡಿ ಎಂದು ಹೇಳುತ್ತಿದ್ದಾರೆ. ರಾತ್ರಿ ವೇಳೆ ಕರೆಂಟನ್ನು ತೆಗೆಯಲೇಬಾರದು ಎಂದು ಮಾಡಿದ್ದೇವೆ. ಇದು ಸಾಧ್ಯವಾಗದ ಮಾತು. ರಾತ್ರಿ ವೇಳೆ ಕರೆಂಟ್‌ನ್ನು ಕಟ್ ಮಾಡಿದರೆ ಕಳ್ಳತನಗಳು ಮತ್ತು ಬೇರೆ ಬೇರೆ ತೊಂದರೆಗಳು ಉದ್ಭವಿಸುವ ಸಾಧ್ಯತೆಗಳಿರುವುದರಿಂದ ರಾತ್ರಿ ವೇಳೆ ಕರೆಂಟನ್ನು ಕಟ್ ಮಾಡಬಾರದು ಎಂದು ಮಾಡಿದ್ದೇವೆ. ರಾತ್ರಿ ಕಾಲದಲ್ಲಿ ಕರೆಂಟನ್ನು ಕೊಟ್ಟರೂ ಕೂಡಾ ಅತ್ಯಾವಶ್ಯಕವಾಗಿ ಬೆಳಕಿಗೆ ಅಷ್ಟೊಂದು ವಿದ್ಯುತ್ ಖರ್ಚಾಗುವುದಿಲ್ಲ. ಈ ದೃಷ್ಟಿಯಿಂದ ನಾವು ರಾತ್ರಿ ಹೊತ್ತು ವಿದ್ಯುತ್ತನ್ನು ಕಡಿತ ಮಾಡಬಾರದು ಎಂದು ಒಂದು ಜನರಲ್ ಪಾಲಿಸಿ ಇರುವುದರಿಂದ ರಾತ್ರಿ ವೇಳೆ ವಿದ್ಯುತ್ತನ್ನು ಕಟ್ ಮಾಡುವುದಕ್ಕೆ ಆಗುವುದಿಲ್ಲ. ೧೨ ಗಂಟೆ ವೇಳೆಯಲ್ಲಿ ರೈತರಿಗೆ ಅನುಕೂಲವಾಗತಕ್ಕಂಥ ೮ ಗಂಟೆ ಅವಧಿಯಲ್ಲಿ ಯಾವಾಗ ನಿಲ್ಲಿಸಿ ಎಂದು ಹೇಳುತ್ತೀರೋ ಆ ಸಮಯದಲ್ಲಿ ವಿದ್ಯುತ್ತನ್ನು ನಿಲ್ಲಿಸುವುದಕ್ಕೆ ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ಇನ್ನು ಪವರ್ ಲೋಡ್ ಷೆಡಿಂಗ್ ಬಗ್ಗೆ ಏನೇನು ದೂರುಗಳು ಬಂದಿವೆಯೋ ಅದನ್ನೆಲ್ಲಾ ಪರಿಶೀಲನೆ ಮಾಡಲು ಪ್ರಯತ್ನಿಸುತ್ತೇನೆ ೨೯ನೇ ತಾರೀಖು ಪವರ್ ರಿವ್ಯೂ ಕಮಿಟಿ ಮೀಟಿಂಗ್ ಸೇರುವುದರಿಂದ ಅಂಥ ಸಂದರ್ಭದಲ್ಲಿ ಸೂಕ್ತವಾದಂಥ ಪ್ರಾರ್ಥನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬ ಭರವಸೆಯನ್ನು ನಾನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ಜಿ. ರಾಜೂಗೌಡ.—ರಾತ್ರಿ ವೇಳೆ ವಿದ್ಯುತ್ ಕೊಟ್ಟರೆ ರೈತರಿಗೆ ಅನುಕೂಲವಾಗುವುದಿಲ್ಲ. ಬೆಳಿಗ್ಗೆ ಹೊತ್ತು ೬ ಗಂಟೆಯಿಂದ ಮಧ್ಯಾಹ್ನ ೨ ಗಂಟೆಯವರೆಗೂ ವಿದ್ಯುತ್ತನ್ನು ಕೊಟ್ಟರೆ ಇದರಿಂದ ರೈತರಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ತಾವು ದಯವಿಟ್ಟು ಯೋಜನೆ ಮಾಡಬೇಕು. ಈ ರೀತಿ ಆಗದೇ ರೈತರುಗಳು ತೊಂದರೆಗೆ ಸಿಲುಕಿಕೊಂಡು ಎಷ್ಟೋ ಜಮೀನನ್ನು ಬಂಜರು ಬಿಟ್ಟಿದ್ದಾರೆ. ಈ ನಿದರ್ಶನವನ್ನು ತಾವು ಬೇಕಾದರೂ ನೋಡಬಹುದು. ನನ್ನ ತಾಲ್ಲೂಕಿನಲ್ಲಿ ಎಂಟು ಸಾವಿರ ಮೋಟಾರುಗಳು ಇವೆ. ಬೆಳಿಗ್ಗೆ ೬ ಗಂಟೆಯಿಂದ ಮಧ್ಯಾಹ್ನ ೨ ಗಂಟೆಯವರೆಗೂ ಕೊಡಿ. ಬೇರೆ ಟೈಮ್‌ನಲ್ಲಿ ಬೇಕಾದರೆ ನಿಲ್ಲಿಸಿ. ದಯವಿಟ್ಟು ತಾವು ರಾತ್ರಿ ಹೊತ್ತು ಕಟ್ ಮಾಡಿ ಬೆಳಿಗ್ಗೆ ೬ ಗಂಟೆಯಿಂದ ಮಧ್ಯಾಹ್ನ ೨ ಗಂಟೆಯವರೆಗೂ ವಿದ್ಯುತ್ತನ್ನು ಕೊಡುವ ಮನಸ್ಸನ್ನು ತಾವು ಮಾಡುತ್ತೀರೆಂದು ನಂಬಿರುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಸಂಪೂರ್ಣವಾಗಿ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನುವುದು ಸರಿಯಲ್ಲ. ಕೆಲವು ಬೆಳೆಗಳಿಗೆ

ಸ್ವಲ್ಪ ಕಷ್ಟವಾಗಬಹುದು, ರಸ್ತೆಗಳಿಗೆ ತೋಟಗಳಿಗೆ ರಾತ್ರಿಯಲ್ಲಿ ಕೆಲವು ಬೆಳಿಗಳಿಗೆ ಸಹಕಾರಿ ಆಗಬಹುದು ರಾತ್ರಿ ವೇಳೆ ವಿದ್ಯುತ್ ಸರಬರಾಜು ಮಾಡುವುದರಿಂದ ರೈತರಿಗೂ ಅನುಕೂಲವಾಗುತ್ತದೆ, ಮಂಡಲಿಯವರಿಗೂ ಅನುಕೂಲವಾಗುತ್ತದೆ. ಬೆಳಿಗ್ಗೆ ಹೊತ್ತು ವೋಲ್ಟೇಜ್ ಕಡಿಮೆ ಆಗಿರುತ್ತದೆ. ೨೯ ರಂದು ಪವರ್ ರಿವ್ಯೂ ಕಮಿಟಿಯಲ್ಲಿ ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟು ಕೊಂಡು ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ರಾಮಯ್ಯ.—ಕರೆಂಟ್ ಅನ್ನು ಕೊಡಬೇಕಾದ ಸಮಯದಲ್ಲಿ ಸಹ ಕೊಡುವುದಿಲ್ಲ. ಇದರ ಬಗ್ಗೆ ಗಮನವನ್ನು ತಾವು ಹರಿಸಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಕೆಲವೊಂದು ತಾಂತ್ರಿಕ ಕಾರಣಕ್ಕೋಸ್ಕರ ಒಂದು ಗಂಟೆ. ಎರಡೂ ಗಂಟೆ ವಿದ್ಯುಚ್ಛಕ್ತಿ ಹೋಗುತ್ತದೆ. ಆ ತೊಂದರೆಯನ್ನು ಪರಿಹರಿಸುವುದಕ್ಕೆ ತಕ್ಕ ಪ್ರಯತ್ನವನ್ನು ಮಾಡುತ್ತೇವೆ.

ನಿಯಮ ೩೫೪ ರ ಮೇರೆಗೆ

(೧) ನೇತ್ರಾವತಿ ನದಿ ನೀರಿನ ಸರಬರಾಜನ್ನು ಕೃಷಿಕರಿಗೆ ನಿಲ್ಲಿಸುವುದರಿಂದ ತೊಂದರೆ

ಶ್ರೀ ವಿನಯ ಕುಮಾರ್ ಸೊರ್ಕೆ.—ಮಾನ್ಯ ಅಧ್ಯಕ್ಷರೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರಿನಲ್ಲಿ ಕಾರ್ಪೊರೇಷನ್‌ನಿಂದ ನೀರು ಸರಬರಾಜು ಆಗಬೇಕು. ನೀರು ಸರಬರಾಜು, ಕುಮಾರಧಾರ, ನೇತ್ರಾವತಿಯಿಂದ ಆಗಬೇಕು. ಫೆಬ್ರುವರಿ ನಂತರ ಈ ನೀರು ಸರಬರಾಜನ್ನು ಡಿಸ್ಕನೆಕ್ಟ್ ಮಾಡುವ ದೃಷ್ಟಿಯಿದೆ. ಇದರಿಂದ ಕೃಷಿಕರಿಗೆ ಬಡವರಿಗೆ ತೊಂದರೆ ಆಗುತ್ತದೆ. ಡಿಸ್ಕನೆಕ್ಷನ್ ಮಾಡುವುದಿಲ್ಲ. ಎಂಬ ಆಶ್ವಾಸನೆಯನ್ನು ಮಾನ್ಯ ಸಚಿವರು ಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಹಿಂದಿನ ವರ್ಷ ಡಿಸ್ಕನೆಟ್ ಮಾಡಬೇಕೆಂಬ ವಿಚಾರ ಬಂದಿತ್ತು, ಇನ್ನು ಮುಂದೆ ಮಾಡುವುದಿಲ್ಲ.

(2) ಬೆಂಗಳೂರು ನಗರ ಕಾರ್ಪೋರೇಷನ್ನಿನ ವ್ಯಾಪ್ತಿಯಲ್ಲಿರುವ ನಿವೇಶನಗಳಲ್ಲಿ ಮನೆಗಳನ್ನು ಕಟ್ಟುವಾಗ ಬೆಟರ್‌ಮೆಂಟ್ ಚಾರ್ಜು ವಿಧಿಸುವುದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರ ಕಾರ್ಪೊರೇಷನ್ ವ್ಯಾಪ್ತಿಯಲ್ಲಿರುವ ಖಾಲಿಯಿರುವ ನಿವೇಶನಗಳಲ್ಲಿ ಮನೆ ಕಟ್ಟಲು ಲೈಸೆನ್ಸ್ ಕೇಳಿದಾಗ ಬೆಟರ್‌ಮೆಂಟ್ ಚಾರ್ಜು ಎಂದು ಒಂದು ನಿವೇಶನಕ್ಕೆ ಮನೆ ಕಟ್ಟುವ ಹಾಗಿದ್ದರೆ ಮೀಟರಿಗೆ ಐದು ರೂಪಾಯಿ, ವರ್ಕ್‌ಶಾಪ್ ಇಡುವ ಹಾಗಿದ್ದರೆ ಹತ್ತು ರೂಪಾಯಿ, ಅಂಗಡಿ ಅಥವಾ ಹೋಟೆಲಾದರೆ ಇಪ್ಪತ್ತೈದು ರೂಪಾಯಿಗಳನ್ನು ಹಾಕಿರುವ ಶುಲ್ಕ ತುಂಬಾ ಅನ್ಯಾಯ ಕಟ್ಟುವ ಜಾಗ ಸ್ವಲ್ಪವಿದ್ದರೂ ಅದನ್ನು ಪರಿಗಣಿಸದೆ ಒಟ್ಟು ನಿವೇಶನದ ವಿಸ್ತೀರ್ಣಕ್ಕೆಲ್ಲ ಶುಲ್ಕ ವಿಧಿಸುವುದು ನ್ಯಾಯ ನೀತಿಗೆ ವಿರೋಧವಾಗಿದೆ. ಈ ಬಗ್ಗೆ ಜನತೆಯ ಪ್ರತಿಭಟನೆಯನ್ನು ಸೂಚಿಸಿದ್ದಾರೆ ಈ ನೀತಿಯನ್ನು ಪುನರ್ ವಿಮರ್ಶಿಸುವುದಾಗಿ ಸರ್ಕಾರ ಮತ್ತು ನಗರ ಕಾರ್ಪೊರೇಷನ್‌ರವರು ಒಪ್ಪಿಕೊಂಡಿದ್ದರೂ ಪುನರ್ ವಿಮರ್ಶಿಸಿದ ಕಾರಣ, ಸಾವಿರಾರು ಜನ ತಮ್ಮ ಮನೆಗಳನ್ನು ಕಟ್ಟಿದೆ. ಕಟ್ಟಿಡದ ಕೆಲಸಗಳು ಸ್ಥಗಿತಗೊಂಡಿದೆ. ಸರ್ಕಾರ ಈ ನೀತಿಯನ್ನು ಮತ್ತು ನಿಯಮವನ್ನು ಪುನರ್ ವಿಮರ್ಶಿಸಿ ಮೊದಲು ಅನುಸರಿಸಿದ ನೀತಿ ನಿಯಮಗಳ ಪ್ರಕಾರ ಕಟ್ಟಿಡಗಳನ್ನು ಕಟ್ಟಲು ಅನುಮತಿ ನೀಡುವುದು ನ್ಯಾಯ ಸಮ್ಮತವಾಗಿರುವುದರಿಂದ ಈ ಬಗ್ಗೆ ಸರ್ಕಾರ ತನ್ನ ಹೇಳಿಕೆಯನ್ನು ಸದನಕ್ಕೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಈಗ ಸದಸ್ಯರು ಹೇಳಿದ ಹಾಗೆ ಅಭಿವೃದ್ಧಿ ಶುಲ್ಕ ಬೆಟರ್‌ಮೆಂಟ್ ಛಾರ್ಜ್ ಇದುವರೆಗೆ ನಿವೇಶನ ಎಷ್ಟು ಅಳತೆ ಇತ್ತೋ ಆದರ ಮೇಲೆ ಹಾಕಲಾಗುತ್ತಿತ್ತು. ೧ ಅಥವಾ ೨ ರೂಮ್ ಇದ್ದು ಸಂದರ್ಭದಲ್ಲಿ ಪೂರ್ಣವಾಗಿ ನಿವೇಶನಕ್ಕೆ ಹಾಕಿದ್ದರೆ ಶುಲ್ಕ ಹೆಚ್ಚು ಆಗುತ್ತದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ನಾವು ಇದರ ಬಗ್ಗೆ ಈಗಾಗಲೇ